## ನಿಮ್ಮೊಡನೆ

# ನಗರ ಯೋಜನೆಗೆ ‘ಮಳೆ ಪರೀಕ್ಷೆ’

ಮಳೆಯಿಂದ ನಗರಗಳಲ್ಲಿ ಉಂಟಾಗುವ ಅನಾಹುತಗಳಿಂದ ರಕ್ಷಿಸಿಕೊಳ್ಳುವುದು ಸರ್ಕಾರದ ಜವಾಬ್ದಾರಿಯಷ್ಟೇ ಅಲ್ಲ; ನಾಗರಿಕರದ್ದೂ ಹೌದು.

ಪ್ರತಿವರ್ಷದ ಮಳೆಗಾಲ ನಮ್ಮ ನಗರ ಯೋಜನೆಗಳಿಗೆ ಒದಗಿಬರುವ ಅಗ್ನಿಪರೀಕ್ಷೆಗಳು. ಆದರೆ, ಈ ವಾರ್ಷಿಕ ಪರೀಕ್ಷೆಗಳಲ್ಲಿ ಪ್ರತಿವರ್ಷವೂ ನಪಾಸಾಗುವುದು ನಗರ ನಿರ್ಮಾತೃಗಳಿಗೆ ರೂಢಿಯಾಗಿಬಿಟ್ಟಿದೆ. ಪ್ರತಿ ಮಳೆಗಾಲದಲ್ಲೂ ನಗರಯೋಜನೆಯ ಲೋಪಗಳ ಬಗ್ಗೆ ಚರ್ಚೆಗಳಾಗುತ್ತವೆ. ಈ ಚರ್ಚೆಗಳ ಫಲಶ್ರುತಿ ಎನ್ನುವಂತೆ ಗುಂಡಿ ಮುಚ್ಚುವ ಹಾಗೂ ಚರಂಡಿಗಳಲ್ಲಿನ ಹೂಳು ತೆಗೆಯುವ ಕಾಮಗಾರಿಗಳು ನಡೆಯುತ್ತವೆ. ಸಾವಿರಾರು ಕೋಟಿ ರೂಪಾಯಿ ಖರ್ಚಾಗುತ್ತದೆ. ಆದರೆ, ಮುಂದಿನ ವರ್ಷ ಮತ್ತದೇ ಸಮಸ್ಯೆ, ಮತ್ತದೇ ಗಡಿಬಿಡಿ. ಇದರರ್ಥ, ಮಳೆಯ ಸಮಸ್ಯೆಗೆ ಶಾಶ್ವತ ಪರಿಹಾರವೊಂದನ್ನು ಕಂಡುಕೊಳ್ಳಲು ನಮಗೆ ಸಾಧ್ಯವಾಗಿಲ್ಲ ಅಥವಾ ಅಂಥ ಪರಿಹಾರ ನಮಗೆ ಬೇಕಿಲ್ಲ.

ಬೆಂಗಳೂರಿನ ಪ್ರಮುಖ ರಸ್ತೆಗಳು ಹಾಗೂ ವಾರ್ಡ್ ಮಟ್ಟದ ರಸ್ತೆಗಳ ಅಭಿವೃದ್ಧಿಗಾಗಿ ‘ನಗರೋತ್ಥಾನ ಯೋಜನೆ’ಯಡಿ ಕಳೆದ ಮೂರು ವರ್ಷಗಳಲ್ಲಿ ಖರ್ಚಾಗಿರುವ ಮೊತ್ತ 3600 ಕೋಟಿ ರೂಪಾಯಿ! ಪ್ರಸಕ್ತ ಸಾಲಿನಲ್ಲಿಯೇ ಪ್ರಮುಖ ರಸ್ತೆಗಳಿಗೆ 800 ಕೋಟಿ ಹಾಗೂ ವಾರ್ಡ್ ಮಟ್ಟದ ರಸ್ತೆಗಳಿಗೆ 1400 ಕೋಟಿ ರೂಪಾಯಿ ನೀಡಲಾಗಿದೆ. ಆದರೆ, ಆಗಸ್ಟ್–ಸೆಪ್ಟೆಂಬರ್ ತಿಂಗಳಲ್ಲಿ ಸುರಿದ ಮಳೆ ಈ ಸಾವಿರಾರು ಕೋಟಿ ರೂಪಾಯಿಗಳ ಕಾಮಗಾರಿಯ ಹುಳುಕಿಗೆ ಕನ್ನಡಿ ಹಿಡಿದಿದೆ. ಮಳೆ ಎನ್ನುವುದು ನಮ್ಮ ನಗರ ನಿರ್ಮಾತೃಗಳಿಗೆ ಹಾಗೂ ಕಾಮಗಾರಿಗಳನ್ನು ನಿರ್ವಹಿಸುವವರಿಗೆ ಲಾಭಕರವಾಗಿದೆ.

ಕಳೆದ ಒಂದು ತಿಂಗಳ ಅವಧಿಯಲ್ಲಿ ಬೆಂಗಳೂರಿನ ರಸ್ತೆಗಳು ಪದೇ ಪದೇ ಕೆರೆಗಳ ರೂಪು ತಾಳಿವೆ. ಮಳೆನೀರು ತಗ್ಗುಪ್ರದೇಶದ ಮನೆಗಳಿಗೆ ನುಗ್ಗಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಮೆಜೆಸ್ಟಿಕ್, ಶಾಂತಿನಗರ, ಕೋರಮಂಗಲದಂಥ ಪ್ರತಿಷ್ಠಿತ ಪ್ರದೇಶಗಳೇ ದ್ವೀಪಗಳ ರೂಪು ತಾಳಿವೆ. ಎರಡು ಮೂರು ತಾಸು ಸುರಿಯುವ ಮಳೆಯೇ ಇಷ್ಟೆಲ್ಲ ಅನಾಹುತ ಉಂಟುಮಾಡುತ್ತದಾದರೆ, ದಿನಗಟ್ಟಲೆ ಸುರಿದರೇನು ಗತಿ?

ಮಳೆಯಿಂದ ನಗರದಲ್ಲಿ ಉಂಟಾಗುವ ಕೃತಕ ನೆರೆಗೆ ಮುಖ್ಯವಾದ ಕಾರಣ – ರಸ್ತೆ ಹಾಗೂ ಚರಂಡಿಗಳ ನಿರ್ವಹಣೆಯಲ್ಲಿನ ಲೋಪ. ವಿವಿಧ ಕಾಮಗಾರಿಗಳ ಹೆಸರಿನಲ್ಲಿ ರಸ್ತೆಗಳನ್ನು ಆಗಾಗ ಅಗೆಯಲಾಗುತ್ತದೆ. ಆ ಮಣ್ಣು ಚರಂಡಿಗಳನ್ನು ಸೇರುತ್ತದೆ. ವಿವಿಧ ಇಲಾಖೆಗಳ ನಡುವಣ ಕಾರ್ಯ ನಿರ್ವಹಣೆಯಲ್ಲಿ ಇರುವ ಸಮನ್ವಯದ ಕೊರತೆ ಕೂಡ ಸಮಸ್ಯೆಗೆ ಕಾರಣವಾಗಿದೆ. ನೀರು ಇಂಗಲಿಕ್ಕೆ ಇಲ್ಲಿ ಸ್ಥಳವಿಲ್ಲ. ನೀರು ಹರಿದುಹೋಗಲಿಕ್ಕೆ ಕೂಡ ಸಮರ್ಪಕ ವ್ಯವಸ್ಥೆಯಿಲ್ಲ. ಕೆರೆಗಳೆಲ್ಲ ಬಡಾವಣೆಗಳಾಗಿರುವಾಗ, ನೀರು ತಗ್ಗುಪ್ರದೇಶಕ್ಕೆ ನುಗ್ಗುವುದು ಸಹಜವೇ ಆಗಿದೆ. ಒಬ್ಬರೋ ಇಬ್ಬರೋ ರಾಜಕಾಲುವೆಗಳಲ್ಲಿ ಕೊಚ್ಚಿಹೋಗುವುದೂ ರಾಜಧಾನಿಯ ಪಾಲಿಗೆ ವಾರ್ಷಿಕ ಸಂಪ್ರದಾಯವೇ ಆಗಿಹೋದಂತಿದೆ.

ಇದೆಲ್ಲ ಬೆಂಗಳೂರಿನಂಥ ಮಹಾನಗರಕ್ಕೆ ಸೀಮಿತವಾದ ಸಮಸ್ಯೆ ಎನ್ನುವಂತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯಂಥ ಪುಟ್ಟ ಪಟ್ಟಣದಲ್ಲೂ ಎರಡು ಮೂರು ತಾಸು ಜೋರು ಮಳೆ ಸುರಿದರೆ ಕೃತಕ ನೆರೆ ಸೃಷ್ಟಿಯಾಗುತ್ತದೆ. ಬೆಳಗಾವಿಯ ಅಥಣಿಯಲ್ಲಿ ಸರ್ಕಾರಿ ಆಸ್ಪತ್ರೆಗೆ ನೀರುನುಗ್ಗುತ್ತದೆ. ದಾವಣಗೆರೆಯಲ್ಲಿ ಅಗ್ನಿಶಾಮಕ ಠಾಣೆಯ ಪರಿಸರವೇ ಕೆರೆಯಾಗಿ ಬದಲಾಗುತ್ತದೆ. ರಾಜ್ಯದ ಯಾವ ನಗರದ ಮಳೆವರದಿಗಳನ್ನು ನೋಡಿದರೂ– ಮಳೆಯಿಂದ ಸೂರು ಕಳೆದುಕೊಂಡು ಬೀದಿಗೆ ಬಿದ್ದ ನತದೃಷ್ಟರು ಕಾಣಸುತ್ತಾರೆ.

ಪ್ರತಿ ಮಳೆಋತು ನಮ್ಮ ನಾಗರಿಕ ವಿವೇಕದ ಅಸಲಿ ಬಣ್ಣವನ್ನೂ ಬಯಲಾಗಿಸುತ್ತದೆ. ಈ ವರ್ಷ ಬೆಂಗಳೂರಿನ ರಸ್ತೆಗಳು ಕೆರೆಗಳ ರೂಪು ತಳೆದ ಬಗ್ಗೆ ಪಾಲಿಕೆಯನ್ನು ದೂಷಿಸುವ ನಾವು, ಮಳೆಕೊಯ್ಲಿನ ಸಾಧ್ಯತೆಯನ್ನು ಗಂಭೀರವಾಗಿ ಪರಿಗಣಿಸಿಯೇ ಇಲ್ಲ. ಬೆಂಗಳೂರಿನ ಪರಿಸ್ಥಿತಿ ನೋಡಿ: ಕಳೆದ ಸೆಪ್ಟೆಂಬರ್‌ನಲ್ಲಿ 514 ಮಿ.ಮೀ. ಮಳೆಯಾಗಿದೆ. ಇದು ದಶಕದಲ್ಲೇ ದಾಖಲೆಯ ಮಳೆ. ಆದರೆ, ಈ ನೀರನ್ನು ಹಿಡಿದಿಟ್ಟುಕೊಳ್ಳಲು ಕಾಳಜಿ ವಹಿಸಿದವರು ತೀರಾ ಕಡಿಮೆ. ಪ್ರತಿ ವರ್ಷ ಸುಮಾರು 14 ಟಿಎಂಸಿ ಅಡಿಯಷ್ಟು ನೀರು ಬೆಂಗಳೂರಿನ ಚರಂಡಿಗಳಲ್ಲಿ ಹರಿದುಹೋಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಕೆಲವು ಭಾಗ ನೀರನ್ನಾದರೂ ಹಿಡಿದಿಡುವುದು ಸಾಧ್ಯವಾದಲ್ಲಿ ನಗರದ ಬೇಸಿಗೆ ನೀರಿನ ಕೊರತೆಯ ಸಮಸ್ಯೆ ಕೊಂಚ ಹಗುರವಾದರೂ ಆಗುತ್ತಿತ್ತು. ರಾಜಧಾನಿಯಲ್ಲಿ 19 ಲಕ್ಷಕ್ಕೂ ಹೆಚ್ಚು ಕಟ್ಟಡಗಳಿದ್ದು, ಇವುಗಳಲ್ಲಿ 54 ಸಾವಿರ ಕಟ್ಟಡಗಳಲ್ಲಷ್ಟೇ ಮಳೆನೀರು ಕೊಯ್ಲಿನ ವ್ಯವಸ್ಥೆಯಿದೆ. ಅನೇಕ ಕಟ್ಟಡಗಳ ಮಾಲೀಕರು ದಂಡಕಟ್ಟಿದ್ದಾರೆ; ಮಳೆನೀರನ್ನು ಸಂಗ್ರಹಿಸಲು ಮಾತ್ರ ಮುಂದಾಗಿಲ್ಲ.

ಬೇಜವಾಬ್ದಾರಿಯಿಂದ ಬಳಸಿ ಎಸೆದ ಪ್ಲಾಸ್ಟಿಕ್ ತ್ಯಾಜ್ಯಗಳು ಚರಂಡಿಗಳಲ್ಲಿ ಸೇರಿ ನೀರಿನ ಸರಾಗ ಹರಿವಿಗೆ ಅಡ್ಡಿಯಾಗುವುದನ್ನು ನಾವು ಗಮನಿಸುವುದಿಲ್ಲ. ಕಾಲುವೆಗಳನ್ನು ಒತ್ತರಿಸಿ ಮನೆಗಳನ್ನು ಕಟ್ಟುತ್ತೇವೆ. ಮನೆಯ ಸುತ್ತ ಇರಬಹುದಾದ ಮಣ್ಣಿಗೆಲ್ಲ ಕಾಂಕ್ರೀಟು–ಡಾಂಬರು ಬಳಿಯುವಲ್ಲಿ ಸ್ಪರ್ಧೆಯನ್ನೇ ನಡೆಸುತ್ತೇವೆ. ಮಳೆಯಿಂದ ನಗರಗಳನ್ನು ರಕ್ಷಿಸಿಕೊಳ್ಳುವುದು ಸರ್ಕಾರದ ಜವಾಬ್ದಾರಿಯಷ್ಟೇ ಅಲ್ಲ; ನಾಗರಿಕರದ್ದೂ ಹೌದು.

■ **ರಘುನಾಥ ಚ.ಹ.**



ಈಶ್ವರ್